ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:**1248/2019**

ಪಿ.ಡಬ್ಲ್ಯೂ-**1**
ಸಿ.ಡಬ್ಲ್ಯೂ-**1**

ಸಾಕ್ಷಿಗೆ ದಿನಾಂಕ **02-04-2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು : ಬಸಮ್ಮ

ಗಂಡನ ಹೆಸರು : ಈಶ್ವರಪ್ಪ

ವಯಸ್ಸು : 38 ವರ್ಷ

ಉದ್ಯೋಗ : ಗೃಹಿಣಿ

ವಾಸಸ್ಥಳ : ಕೊಂಡಾಪುರ ಗ್ರಾಮ

ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನ್ನ ಮೈದುನ. ಚಾಸಾ-4 ನನ್ನ ಗಂಡ . ಚಾಸಾ 5 ಮತ್ತು 6 ರವರ ಪರಿಚಯವಿರುತ್ತದೆ.

ನಮ್ಮ ಮತ್ತು ಆರೋಪಿ ನಡುವೆ ಯಾವುದೇ ಜಗಳ ನಡೆದಿಲ್ಲ. ಆರೋಪಿ ನನ್ನ ಮೇಲೆ ಯಾವುದೇ ಹಲ್ಲೆ ಮಾಡಿರುವುದಿಲ್ಲ . ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ. ನನ್ನ ಮಾನಕ್ಕೆ ಕುಂದುಂಟು ಮಾಡಿರುವುದಿಲ್ಲ. ನಾವು ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿಯು ಹೇಳಿಕೆ ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ-01 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-01(ಎ) ಎಂದು ಗುರುತಿಸಲಾಯಿತು.

ನಿಪಿ-1 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ನೋಡಿ ಗುರುತಿಸಿರುವುದಿಲ್ಲ.

**(**ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು**)**

ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ

ದಿಃ 04.06.2019 ರಂದು ಸಂಜೆ 7.30 ಗಂಟೆ ಸಮಯದಲ್ಲಿ ನಾನು, ಚಾಸಾ 4 ಮನೆಯ ಹತ್ತಿರವಿದ್ದಾಗ ಆರೋಪಿ ಏಕಾಏಕಿ ನನ್ನ ಹಿಂದುಗಡೆಯಿಂದ ಬಂದು ನನ್ನನ್ನು ಬಾಚಿ ಹಿಡಿದುಕೊಂಡನು ಎಂದರೆ ಸರಿಯಲ್ಲ . ನನ್ನ ಸೀರೆಯನ್ನು ಎಳೆದು ನನ್ನ ಅತ್ಯಾಚಾರಕ್ಕೆ ಪ್ರಯತ್ನಪಟ್ಟನು ಎಂದರೆ ಸರಿಯಲ್ಲ . ನಾನು ಕೂಗಿಕೊಂಡಾಗ ಚಾಸಾ 4 ಹೊರಗೆ ಬಂದು ನನ್ನನ್ನು ಬಿಡಿಸಲು ಬಂದಾಗ ಆರೋಪಿ ಅಲ್ಲೇ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ಚಾಸಾ 4 ರವರ ತಲೆಗೆ ಹೊಡೆದು ರಕ್ತಗಾಯಪಡಿಸಿದರು ಎಂದರೆ ಸರಿಯಲ್ಲ . ಆಗ ಅಲ್ಲಿಗೆ ಬಂದು ಚಾಸಾ 5 ಮತ್ತು 6 ರವರು ಗಲಾಟೆ ಬಿಡಿಸಿದರು ಎಂದರೆ ಸರಿಯಲ್ಲ . ನಂತರ ಆರೋಪಿ ಹೋಗುವಾಗ ನಮಗೆ ಜೀವಬೆದರಿಕೆ ಹಾಕಿದರು ಎಂದರೆ ಸರಿಯಲ್ಲ . ನಂತರ ಚಾಸಾ 5 ರವರು ನಮ್ಮನ್ನು ಒಂದು ಆಟೋದಲ್ಲಿ ಹೊಸದುರ್ಗದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ . ಈ ಕುರಿತು ದಿಃ 06.06.2019 ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ .

ಆರೋಪಿ ನಮ್ಮ ಸಂಬಂಧಿಕ ಎಂದರೆ ಸರಿ. ಆರೋಪಿ ನಮ್ಮ ವಿರುದ್ಧ ಸಿ.ಸಿ. ನಂಬರ್ 1249/2019 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಆರೋಪಿಯೊಂದಿಗೆ ರಾಜೀಯಾಗಿದ್ದೇನೆಂದರೆ ಸರಿ. ರಾಜಿಯಾಗಿರುವ ಕಾರಣ ನಿಪಿ-1 ರಂತೆ ಹೇಳಿಕೆ ದೂರು, ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿಗಳ ಪರ ಶ್ರೀ ಕೆ . ಎಂ. ವಕೀಲರಿಂದ

ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಏನೂ ಇಲ್ಲ ಎಂದು ಸಲ್ಲಿಸುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ್ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಇದೆ.

(ಪ್ರಸನ್ನಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹೊಸದುರ್ಗ.